


**ಸ್ಟ್ಯಾಂಡ್–ಅಪ್ ಕಾಮಿಡಿ ಸಂಸ್ಕೃತಿ ಕನ್ನಡದ ನೆಲದಲ್ಲಿನ್ನೂ ಬಲವಾಗಿ ಬೇರೂರಿಲ್ಲ. ಆದರೂ ಹೊಸ ಪೀಳಿಗೆಯ ಕೆಲ ಗುಂಪುಗಳು ಯೂ ಟ್ಯೂಬ್‌ನಿಂದ ಇಳಿದುಬಂದು ಮೈಕ್ ಮುಂದೆ ನಿಂತು, ಜನರನ್ನು ಕೂಡಿಸಿ ನಗೆಗುಳಿಗೆಯನ್ನು ನೀಡುವ ಕಾಯಕ ಶುರುಮಾಡಿದ್ದಾರೆ.**

ಹೋದ ವರ್ಷ ನಮ್ಮ ಚಂದಾದಾರರ ಸಂಖ್ಯೆ 7 ಸಾವಿರವಷ್ಟೇ ಇತ್ತು. ಈ ವರ್ಷದ ಹೊತ್ತಿಗೆ ಅದು 19 ಸಾವಿರಕ್ಕೆ ಏರಿರುವುದು ಸಂತೋಷದ ವಿಚಾರ. ಪ್ರತಿ ವಿಡಿಯೊಗೆ ಐದು ಲಕ್ಷಕ್ಕೂ ಹೆಚ್ಚು ಪ್ರೇಕ್ಷಕರು ಸಿಕ್ಕರಷ್ಟೇ ಒಳ್ಳೆಯ ಬಂಡವಾಳ ಹೂಡಿದವರು ಮರಳಿ ಪಡೆಯಬಹುದು. ಇಲ್ಲಿ ಸುಲಭವಾಗಿ ಹಣ ಸಿಗುತ್ತದೆ ಎಂದು ಭಾವಿಸಿಯೇ ಎಷ್ಟೋ ಜನ ಲಕ್ಷದಿಂದ ಕೋಟಿವರೆಗೆ ಖರ್ಚು ಮಾಡಿ ಕೈಸುಟ್ಟುಕೊಂಡಿರುವುದೂ ಇದೆ. ನಾವು ಮೊದಲಿನಿಂದ ಎಚ್ಚರಿಕೆಯ ಹೆಜ್ಜೆಗಳನ್ನೇ ಇಡುತ್ತಾ ಬಂದಿರುವುದರಿಂದ ಉಳಿದುಕೊಂಡಿದ್ದೇವೆ' ಎನ್ನುತ್ತಾರೆ ಶ್ರವಣ್.

ಭುವನ್ ಬಾಮ್, ಸೂಪರ್ ವುಮನ್ (ಲಿಲ್ಲಿ ಸಿಂಗ್) ತರಹದ ಯೂಟ್ಯೂಬರ್‌ಗಳು ಆ ವೇದಿಕೆಯಿಂದಲೇ ಲಕ್ಷಗಟ್ಟಲೆ, ಕೋಟಿಗಟ್ಟಲೆ ವ್ಯೂಸ್ ಸಂಪಾದಿಸಿ, ಸಿನಿಮಾಗಳಲ್ಲಿ ಅವಕಾಶ ಗಿಟ್ಟಿಸುವ ಮಟ್ಟಕ್ಕೆ ಬೆಳೆದಿದ್ದಾರೆ ಎನ್ನುವ ಶ್ರವಣ್, ತಾವೂ ಚಲನಚಿತ್ರ ಕ್ಷೇತ್ರದಲ್ಲಿ ಒಂದು ಕೈ ನೋಡಲು ನಿರ್ಧರಿಸಿದ್ದಾರೆ.

ಯೂಟ್ಯೂಬ್‌ನಿಂದ ಹೊರಜಿಗಿದು, 'ಓಪನ್ ಮೈಕ್' ಪರಿಕಲ್ಪನೆಯನ್ನೂ ಅವರು ಮೂರು ತಿಂಗಳಿಂದ ಪ್ರಾರಂಭಿಸಿದ್ದಾರೆ. ವೇದಿಕೆ ಹತ್ತದೇ ಇರುವವರು ತಂತಮ್ಮ ಪ್ರತಿಭೆಯನ್ನು ಅಲ್ಲಿ ಪ್ರದರ್ಶಿಸಬಹುದು. ಅದಕ್ಕೂ ಸಾಮಾಜಿಕ ಜಾಲತಾಣದಲ್ಲಿ ಮುಕ್ತ ಆಹ್ವಾನ ನೀಡುತ್ತಾರೆ. ಆದರೆ, ಆಯ್ದ ಹದಿನೈದು ಪ್ರತಿಭೆಗಳಿಗೆ ಅಷ್ಟೇ ಅಲ್ಲಿ ಅವಕಾಶ ನೀಡುತ್ತಾ ಬಂದಿದ್ದಾರೆ.

'ಯೂಟ್ಯೂಬ್ ಚಾನಲ್‌ನಲ್ಲಿ ನೋಡುವವರಿಗಿಂತ ಪ್ರತಿಭೆ ಪ್ರದರ್ಶಿಸಲು ಮುಂದಾಗುವವರ ಸಂಖ್ಯೆಯೇ ಹೆಚ್ಚಾಗಿದೆ. ಪುಸ್ತಕ ಓದುವವರಿಗಿಂತ ಬರೆಯುವವರೇ ಹೆಚ್ಚಾಗಿದ್ದಾರೆ ಎನ್ನುವ ಈ ಕಾಲದ ಜೋಕು ಇರುವಂತೆಯೇ ಇಲ್ಲೂ ಪರಿಸ್ಥಿತಿ ಇದೆ. ಅಕ್ಟೋಬರ್‌ನಿಂದ ನಾವು ಸ್ಟ್ಯಾಂಡ್–ಅಪ್ ಕಾಮಿಡಿ ಕ್ಷೇತ್ರಕ್ಕೆ ಲಗ್ಗೆ ಇಡಲು ನಡೆಸುತ್ತಿರುವ ವ್ಯವಸ್ಥಿತ ತಾಲೀಮು ಇದು. ಸುಬ್ರಹ್ಮಣ್ಯ ಹೆಗಡೆ ಹಾಗೂ ನಾನು ಸೇರಿ ಇಂಥ ಪ್ರಯೋಗಕ್ಕೆ ಕೈಹಾಕಿದ್ದೇವೆ. ಕೆಲವು ಪ್ರತಿಭಾವಂತರು ಸಿಗುತ್ತಾರೆ. ಎಷ್ಟೋ ಜೊಳ್ಳುಕಾಳುಗಳೂ ಇರುತ್ತವೆ' ಎನ್ನುತ್ತಾ ನಗುತ್ತಾರೆ ಶ್ರವಣ್. ಹಾಸ್ಯ ಎಂದರೆ ಕೇವಲ ಮಾತಾಡಿಯೇ ನಗಿಸಬೇಕು ಎಂದೇನೂ ಇಲ್ಲ. ಈ ವೇದಿಕೆಯಲ್ಲಿ ಹಾಡಲು, ಚುಟುಕು ಚಟಾಕಿ ಹಾರಿಸಲು ಕೂಡ ಅವಕಾಶ ಒದಗಿಸುತ್ತಿದ್ದಾರೆ.

'ಉತ್ತರ ಕರ್ನಾಟಕದ ಸ್ಲ್ಯಾಂಗ್‌ಗೆ ಯೂಟ್ಯೂಬ್ ವೇದಿಕೆಯಲ್ಲಿ ಒಂದಿಷ್ಟು ಹೆಚ್ಚು ಪ್ರೇಕ್ಷಕರು ಇದ್ದಾರೆ. ನಮ್ಮ ತಂಡದಲ್ಲಿ ಈಗ ಯಾರೂ ಆ ಭಾಷೆ ಬಲ್ಲವರು ಇಲ್ಲ. ಅದೊಂದು ಅಳವಡಿಸಿಕೊಳ್ಳಬೇಕಾದ ಅಂಶವಾಗಿದೆ' ಎನ್ನುವ ಶ್ರವಣ್ ಮಾತು ಈ ಮಾಧ್ಯಮದ ಸಾಧ್ಯತೆ ಹಾಗೂ ಮಿತಿ ಎರಡನ್ನೂ ತಿಳಿಸುತ್ತದೆ.

ತಮಿಳಿನಲ್ಲಿ 'ಪುಟ್ ಚಟ್ನಿ' ಹಾಗೂ ತೆಲುಗಿನಲ್ಲಿ 'ಮಹಾತಲ್ಲಿ' ಯೂಟ್ಯೂಬ್ ಚಾನಲ್‌ಗಳು ಪಡೆದುಕೊಂಡ ಜನಪ್ರಿಯತೆ ಕನ್ನಡದಲ್ಲಿ ಸಿಗುತ್ತಿಲ್ಲವಲ್ಲ ಎಂಬ ಬೇಸರವೂ ಅವರಿಗೆ ಇದೆ. ಈಗ ಪ್ರತಿ ವಾರಕ್ಕೊಮ್ಮೆ ಒಂದೊಂದು ವಿಡಿಯೊವನ್ನು '**NAMDU**ಕೆ' ಯೂಟ್ಯೂಬ್ ಚಾನಲ್‌ನಲ್ಲಿ ಅವರು ಅಪ್‌ಲೋಡ್ ಮಾಡುತ್ತಿದ್ದಾರೆ. 'ರೆಸಾರ್ಟ್ ರಾಜಕಾರಣ' ಎಂಬ ಇತ್ತೀಚಿನ ಕಂತಿಗೆ ಸಿಕ್ಕಿದ ಪ್ರತಿಕ್ರಿಯೆ ಕಂಡು ಅವರ ಆತ್ಮವಿಶ್ವಾಸ ಕೂಡ ಹೆಚ್ಚಾಗಿದೆ.

ತಂತ್ರಜ್ಞಾನದ ಕುರಿತು ಓದಿಕೊಂಡ ಹೊಸಕಾಲದ ಯುವಕರು ಹೇಗೆ ಮನರಂಜನೆಯ ಈ ದಿನಮಾನದ ಸಾಧ್ಯತೆಯನ್ನು ಶೋಧಿಸುತ್ತಿದ್ದಾರೆ ಎನ್ನುವುದಕ್ಕೂ ಶ್ರವಣ್ ಉದಾಹರಣೆಯಾಗಿ ಕಾಣುತ್ತಿದ್ದಾರೆ. ಕನ್ನಡದಲ್ಲಿ ಇಂಥ ಇನ್ನಷ್ಟು ಮನಸ್ಸುಗಳೂ ಇವೆ.



